**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 9051/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗಮ್ಮ |
| ಗಂಡನ ಹೆಸರು | : | ಮಂಜುನಾಥ ಕೆ ಎಂ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ದೇವಿರಮ್ಮನಹಳ್ಳಿ ಗೇಟ್, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 04.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ** ಸ. ಸ. **ಅ. ರವರಿಂದಃ**

ಚಾಸಾ–2 ನನ್ನ ಸಹೋದರಿ. ಆರೋಪಿಗಳು ನಮ್ಮ ಅಂಗಡಿಯಲ್ಲಿ ಬಾಡಿಗೆದಾರರಾಗಿದ್ದರು. ಅಂಗಡಿಯ ಬಾಡಿಗೆ ಕೊಡುವ ವಿಚಾರವಾಗಿ ನಮಗು ಮತ್ತು ಆರೋಪಿಗಳಿಗು ಬಾಯಿಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ನಾನು ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳು ದೂರು ಮತ್ತು ಮಹಜರ್ ಗಳಾಗಿದ್ದು, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ದೂರನ್ನು **ನಿ.ಪಿ–1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–1(ಎ)** ಎಂದು, ಸ್ಥಳ ಮಹಜರ್ ನ್ನು **ನಿ.ಪಿ–2** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–2(ಎ)** ಎಂದು ಗುರುತಿಸಲಾಯಿತು. ನಿ.ಪಿ–1 ಮತ್ತು ನಿ.ಪಿ–2 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ. ಆರೋಪಿಗಳು ನನ್ನನ್ನು ಅಕ್ರಮವಾಗಿ ತಡೆದು, ಯಾವುದೇ ರೀತಿ ಹಲ್ಲೆ

ಮಾಡಿಲ್ಲ, ನನಗೆ ಅವಮಾನವಾಗುವಂತೆ ನಡೆದುಕೊಂಡಿಲ್ಲ, ಚಾಸಾ–2 ರವರಿಗೂ ಯಾವುದೇ ರೀತಿ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಜೀವ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 29.03.2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–2 ದೇವಿರಮ್ಮನಹಳ್ಳಿ ಗೇಟ್ ಬಳಿ ಇರುವ ನಮ್ಮ ಮನೆಯ ಮುಂಭಾಗದಲ್ಲಿರುವಾಗ ಆರೋಪಿಗಳು ಅಂಗಡಿ ಖಾಲಿ ಮಾಡಿ ಎಂದು ಹೇಳಿರುವ ವಿಚಾರವಾಗಿ ಮನಸ್ತಾಪ ಹೊಂದಿ ನನ್ನನ್ನು ಅಕ್ರಮವಾಗಿ ತಡೆದು, ನನ್ನ ಕೈ ಹಿಡಿದು ಎಳೆದಾಡಿ, ಹಲ್ಲೆ ಮಾಡಿ ನನಗೆ ಅವಮಾನ ಮಾಡಿ, ಕಲ್ಲಿನಿಂದ ನನ್ನ ಕೆಳದವಡೆಯ ಹಲ್ಲಿನ ಬಳಿ ಹೊಡೆದು ನೋವುಂಟು ಮಾಡಿದ್ದಲ್ಲದೆ, ದೊಣ್ಣೆಯಿಂದ ನನ್ನ ಹೊಟ್ಟೆಗೆ ಮತ್ತು ಬಲಗೈಗೆ ಹೊಡೆದಿದ್ದು, ಚಾಕುವಿನಿಂದ ಹೊಡೆಯಲು ಬಂದಾಗ 4 ನೇ ಆರೋಪಿ ತನ್ನ ಕೈಯಿಂದ ನನ್ನ ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾಸಾ–2 ರವರನ್ನು ತಳ್ಳಿ ಗಾಯಪಡಿಸಿದ್ದು, ನಿಮ್ಮನ್ನು ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ನಿ.ಪಿ–1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ದೂರು ಕೊಟ್ಟ ಮೇರೆಗೆ ದಿನಾಂಕ 31.03.2022 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿಕೊಟ್ಟಂತೆ ನಿ.ಪಿ–2 ರಂತೆ ಮಹಜರ್ ಮಾಡಿ ದೊಣ್ಣೆ, ಕಲ್ಲು ಮತ್ತು ಚಾಕುವನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ

ಮರು ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಮರು ಹೇಳಿಕೆಯ ಭಾಗವನ್ನು **ನಿ.ಪಿ–3** ಎಂದು ಗುರುತಿಸಲಾಯಿತು. ಆರೋಪಿಗಳು ಹಾಗು ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**